ಕಾರಣ. ಈ ಸರ್ಕಾರ ಕಿತ್ತೊಗೆಯಲು ಎಲ್ಲರೂ ಒಗ್ಗಟ್ಟಾಗೋಣ ಎಂದು ಕರೆ ನೀಡಿದರು. ಕೆಲವರು ನೊಂದ ಕುಟುಂಬಕ್ಕೆ ನೆರವು ನೀಡಿ ಎಂದರು. ಕೆಲವರು ಮುಂದೆ ನಮ್ಮ ಸರ್ಕಾರ ಅಧಿಕಾರಕ್ಕೆ ಬಂದರೆ ಖಂಡಿತಾ ರೈತರ ಸಾವಿಗೆ ಕಾರಣವೇನು ಎಂದು ಕಂಡು ಹಿಡಿದು ಶಾಶ್ವತ ಪರಿಹಾರ ನೀಡಲಾಗುವುದು ಎಂದು ಗುಡುಗಿದರು. ಇದೆಲ್ಲ ಭಾಷಣ, ಕೂಗಾಟ, ಚಪ್ಪಾಳೆ, ಜೈಕಾರ, ರೈತನ ಶವ ಪ್ರದರ್ಶನದ ವಸ್ತುವಾಯಿತು. ರಾಜಕೀಯ ಭಾಷಣಕ್ಕೆ ವಿರೋಧ ವ್ಯಕ್ತಪಡಿಸಿದ ರೈತ ಮುಖಂಡರು ರೊಚ್ಚಿಗೆದ್ದರು.

ರೈತನಿಗೆ ಕಳಪೆ ಬೀಜ, ಕಲಬೆರಕೆ ರಾಸಾಯನಿಕ ಗೊಬ್ಬರ ಕೊಟ್ಟಿದ್ದೀರಿ, ಬಿತ್ತಿದ ಬೀಜ ಮೊಳಕೆ ಬರಲಿಲ್ಲ, ಮಾಡಿದ ಸಾಲ ತೀರಿಸಲಾರದೆ, ಅದರ ಬಡ್ಡಿ ಕಟ್ಟಲಾಗದೇ ಅವನು ಸತ್ತಿದ್ದಾನೆ. ಇದಕ್ಕೆಲ್ಲ ನಿಮ್ಮಂಥ ರಾಜಕಾರಣಿಗಳೇ ಕಾರಣ ಎಂದು ಮಾತಿಗಿಳಿದರು. ಸ್ಥಳಕ್ಕೆ ಮುಖ್ಯಮಂತ್ರಿಯೇ ಬರಲಿ ಎಂದು ಪಟ್ಟು ಹಾಕಿದರು. ಸಚಿವರು, ಸರ್ಕಾರದ ಪ್ರತಿನಿಧಿಗಳು ರೈತರಿಗೆ ಕೊಟ್ಟ ಭರವಸೆಗಳಿಗೆ ಬೆಲೆ ಇಲ್ಲವಾಯಿತು.

ಸಿಟ್ಟಿಗೆದ್ದ ತಹಶೀಲ್ದಾರ್, 'ಸ್ವಾಮಿ, ಮೊದಲು ಶವವನ್ನು ಜಿಲ್ಲಾಸ್ಪತ್ರೆ ಶವಾಗಾರಕ್ಕೆ ಸಾಗಿಸಿ, ಆಮೇಲೆ ನೋಡೋಣ' ಎಂದು ಆದೇಶ ನೀಡಿದರು. ರೈತರು ಶವದ ಸುತ್ತ ಕೋಟೆಯಂತೆ ನಿಂತಾಗ ಪೊಲೀಸರು ಲಾಠಿ ಝಳಪಿಸಿದರು.

* * *

ಲಾಠಿ ಬೀಸಿಗೆ ಪ್ರತಿಭಟನಕಾರರು ಚದುರಿದರು. ನಡುರಸ್ತೆಯಲ್ಲೇ ಶವ ಅನಾಥವಾಯಿತು. ಏಟು ತಿಂದು ಗಾಯಗೊಂಡ ರೈತರು ಅದೇ ಆಸ್ಪತ್ರೆಗೆ ದಾಖಲಾದರು. ಪೊಲೀಸರು ದೇಶದ ಬೆನ್ನೆಲುಬಾದ ರೈತರ ಬೆನ್ನಿನ ಮೂಳೆಯನ್ನೇ ಮುರಿದರು. ರಾಜಶೇಖರನ ಬೆನ್ನುಮೂಳೆ ಮುರಿದಿತ್ತು. ಎಷ್ಟೇ ಮುಲಾಮು ಹಚ್ಚಿದರೂ ನೋವು ಮಾತ್ರ ಕಡಿಮೆ ಆಗಲಿಲ್ಲ.

ಚಾಮೇಗೌಡನಂತೆ ತನ್ನ ಹೊಲದಲ್ಲಿ ಬಿತ್ತಿದ ಬೀಜ ಏಕೋ ಮೊಳಕೆಯೊಡೆಯುತ್ತಿಲ್ಲ. ಹಾಕಿದ ಗೊಬ್ಬರ ಏಕೋ ಕೆಲಸ ಮಾಡಲಿಲ್ಲ. ಕೃಷಿ ಅಧಿಕಾರಿಗಳು ಏಕೋ ಊರಿಗೆ ಬರುವುದನ್ನೇ ನಿಲ್ಲಿಸಿಬಿಟ್ಟಿದ್ದಾರೆ. ಬೆಳೆಗಾಗಿ ಮಾಡಿದ ಸಾಲ ಎದೆಮಟ್ಟಕ್ಕೆ ನಿಂತಿದೆ. ದಿಕ್ಕು ತೋಚದಂತೆ ವನಜಾಕ್ಷಿಯನ್ನೇ ದೃಷ್ಟಿಸಿ ನೋಡಿದನು. ಅವಳೇ ಹಸಿರು ಹೊಲ, ತನ್ನದೇ ಸೊಬಗಿನಲ್ಲಿ ಮೈಮರೆತವಳು. ಇದ್ದಕ್ಕಿದ್ದ ಹಾಗೆ ಮಳೆ ಇಲ್ಲದೆ ಒಣಗಿದ ಬೆಳೆಯಂತೆ ಕಂಡಳು. ಅವಳು ಎಷ್ಟೋ ದಿನದಿಂದ ನೀರನ್ನೇ ಕುಡಿದಿಲ್ಲ ಎಂಬಂತೆ ಬಾಯಾರಿದಳು. ಅವಳ ಬಾಡಿದ ಕಣ್ಣಲ್ಲಿ ಹನಿನೀರು ಜಿನುಗಲು ಕಷ್ಟಪಡುತ್ತಿದ್ದವು.

* * *

ಪೊಲೀಸರ ದೌರ್ಜನ್ಯ, ಅಧಿಕಾರಿಗಳು, ರಾಜಕಾರಣಿಗಳು ಮಾಡಿದ ಮೋಸಕ್ಕೆ ರಾಜಶೇಖರ ತನ್ನೆಲ್ಲ ಶಕ್ತಿಯನ್ನು ಕಳೆದುಕೊಂಡನು. ಮುಂದೇನು ಮಾಡುವುದು ಎಂದು ತೋಚದಂತಾದನು. ದಿಕ್ಕುದಿಕ್ಕಿಗೂ ಸಮಸ್ಯೆ, ಪರಿಹಾರ ಹೇಳು ದೇವರೇ ಎಂದು ಕೈಕೈ ಮುಗಿದನು. ಚಾಮೇಗೌಡನಂತೆ ತಾನು ಕೂಡ ಸಾಯುವುದೇ ಲೇಸು ಎಂಬ ಯೋಚನೆ ಬಂತು. 'ಇದೆಂಥ ಹೇಡಿ ಕೆಲಸ, ಇದ್ದು ಕಷ್ಟವನ್ನು ನೀಗಿಸುತ್ತೇನೆ. ನಾನಿದ್ದರೆ ಭೂಮ್ತಾಯಿ ಈ ಹೊತ್ತಲ್ಲ ನಾಳೆ ಕಣ್ಣು ಬಿಡುವಳು. ಇರುವಷ್ಟಕ್ಕೆ ಗಟ್ಟಿಯಾದ ಬೀಜ ತಂದು ಬಿತ್ತನೆ ಮಾಡಿಯೇ ತೀರುತ್ತೇನೆ' ಎಂದು ಹಟ ತೊಟ್ಟು ಹೆಜ್ಜೆ ಕಿತ್ತನು.

ಭಾವನೆಗಳ ನಾಗಾಲೋಟದಲ್ಲಿ ಸಿಲುಕಿದ ಅವನು ಮತ್ತು ಅವಳು, ಇಬ್ಬರೂ ನರಳಿದರು. ಅವನು ತನ್ನ ಹೊಲದಲ್ಲಿ ಗಟ್ಟಿಬೀಜ ಬಿತ್ತಿ ಒಳ್ಳೆಯ ಬೆಳೆ ಬೆಳೆಯಬೇಕು. ಮಾಡಿದ ಸಾಲದ ಋಣ ತೀರಿಸ ಬೇಕೆಂದು ಹೊರಟನು. ತಾನು ನಿಂತ ನೆಲವೇಕೆ ಇಷ್ಟೊಂದು ಸುಡುತ್ತಿದೆ ಎಂದು ಸುತ್ತಮುತ್ತ ನೋಡಿದನು. ಸೂರ್ಯ ಕೆಂಡದುಂಡೆಯಾಗಿ ಸಿಡಿಯುತ್ತಿದ್ದನು. ಕೆಂಡವೇ ತನ್ನ ಮೈಮೇಲೆ ಬೀಳುತ್ತಿದೆ ಎಂಬಂತೆ ಚಡಪಡಿಸಿದನು. ವನಜಾಕ್ಷಿ ತನ್ನೆಲ್ಲ ಹಿಡಿತ ಕಳಚಿಕೊಂಡು ಎಲ್ಲೋ ಸುಖ ಅರಸಿ ಕೊಂಡು ಹೋದಂತೆ ಕಂಡಳು. ಅವಳು ತನ್ನಿಂದ ದೂರ ಹೋಗುತ್ತಿದ್ದಾಳೆ ಅನಿಸಿತು. ಹರೆಯದ ಗಂಡೈಕಳ ಕಣ್ಣಲ್ಲಿ ಇವಳದೇ ಕನಸು, ಎಲ್ಲೆಂದರಲ್ಲಿ ಇವಳದೇ ನೆನಪು, ಬಿಸಿಯುಸಿರು.

* * *